ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 03.03.2025.
**ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀ ವಿ.ವಿ.ಸಿ. ವಕೀಲರಿಂದಃ**

ಅಪಘಾತ ದಿಃ 28.08.2023 ರಂದು ಆಗಿರುತ್ತದೆ. ನಮ್ಮ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು ಅಪಘಾತ ದಿಃ 23.08.2023 ರಂದು ಆಗಿದೆ ಎಂದು ಕಾಣಿಸಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಾನು ಮೇಲೆ ಹೇಳಿದ ದಿಃ 28.08.2023 ರಂದು ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ಅಮೃತ ಕುಂಡದಿಂದ ಸುಂದರವಾಡಿ ಗ್ರಾಮಕ್ಕೆ ಹೋಗುತ್ತಿದ್ದೆ. ನಾನು ಆ ದಿನ ಟಂಟಂ ವಾಹನದಲ್ಲಿ ಹೊರಟಿದ್ದೆ. ಸದರಿ ಟಂಟಂ ವಾಹನದಲ್ಲಿ ನಾಲ್ಕು ಜನ ದೊಡ್ಡವರು ನಾಲ್ಕು ಜನ ಚಿಕ್ಕವರು ಇದ್ದೇವು. ಸದರಿ ಟಂಟಂನ್ನು ಸುನೀಲ್ ಜಗದಾಳೆ ಚಲಾಯಿಸುತ್ತಿದ್ದರು. ಸದರಿ ಟಂಟಂ ವಾಹನ ಚಾಲಕನ ಸಿಟಿನ ಅಕ್ಕ-ಪಕ್ಕ ಆತನ ಹೆಂಡತಿ ಪ್ರಮೀಳಾ ಕುಳಿತಿದ್ದಳು. ನನ್ನ ಮಗಳು ಪೂಜಾ ಹಿಂದಿನ ಸಿಟಿನಲ್ಲಿ ಕುಳಿತ್ತಿದ್ದಳು.

ಸದರಿ ಅಪಘಾತ ಮಧ್ಯಾಹ್ನ 1.30-2.00 ಗಂಟೆಗೆ ಆಗಿರುತ್ತದೆ. ಲಾರಿ ನಂ.ಕೆಎ-56-0575 ನಮ್ಮ ಹಿಂದಿನಿಂದ ಬಂದಿರುತ್ತದೆ. ಆ ದಿನ ನಮ್ಮ ಆಟೋ ಸಾವಕಾಶವಾಗಿ ಚಲಿಸುತ್ತಿತ್ತು. ಆ ದಿನ ಸುನೀಲ್ ಆಟೋವನ್ನು ಜೋರಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಪೊಲೀಸರಿಗೆ ದೂರನ್ನು ಸದಾಶಿವ ಜಗದಾಳೆ ಕೊಟ್ಟಿರುತ್ತಾರೆ. ಆತ ಅಪಘಾತದ ಸ್ಥಳದಲ್ಲಿ ಇರಲಿಲ್ಲ. ಅಪಘಾತದ ದಿನ ಸದರಿ ಸದಾಶಿವ ಬಂದಿದ್ದ. ಸುನೀಲ್ ತಪ್ಪಿನಿಂದ ಸದರಿ ಅಪಘಾತವಾಗಿದ ಎಂದರೆ ಸರಿಯಲ್ಲ. ಸದರಿ ಆಟೋ ವಿಮೆ ಹೊಂದಿತ್ತು, ಆದರೆ ಯಾವ ಕಂಪನಿ ಇತ್ತು ಎಂದು ನನಗೆ ಗೊತ್ತಿಲ್ಲ. ಸುನಿಲ್ ಆಟೋ ಚಲಾವಣೆ ಮಾಡಲು ಡಿಎಲ್ ಮತ್ತು ಪರಮಿಟ್ ಹೊಂದಿದ್ದ. ಆ ದಿನ ಸುನಿಲ್ ತನ್ನ ಆಟೋದ ಬ್ರೆಕ್ ನ್ನು ಒಮ್ಮೆಲೆ ಹಾಕಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

ಅಪಘಾತವನ್ನು ನಾನು ನೋಡಿಲ್ಲ ಎಂದರೆ ಸರಿ. ನನ್ನ ಮಗಳು ಹಿಂದಿನ ಸಿಟಿನಲ್ಲಿ ಕುಳಿತಿದ್ದಳೋ ಅಥವಾ ಮುಂದಿನ ಸಿಟಿನಲ್ಲಿ ಕುಳಿತಿದ್ದಳೋ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ನಾಲ್ಕು ಜನ ಮಕ್ಕಳು, ಮೃತ ಪೂಜಾ ನನ್ನ ಮೊದಲ ಮಗಳ ಆಗಿರುತ್ತಾಳೆ. ಉಳಿದ ಮೂರು ಜನ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಪೂಜಾ ಇವಳ ಹುಟ್ಟಿದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ನನ್ನ ಮಗಳು ಪೂಜಾ ಪಿಯುಸಿ 2ನೇ ವರ್ಷ ಓದುತ್ತಿದ್ದಳು. ಪೂಜಾ ರವರ 10ನೇ ತರಗತಿ ಅಂಕಪಟ್ಟಿ ಇರುತ್ತದೆ. ಪೂಜಾ ಇವಳು 18 ವರ್ಷದವಳು ಇದ್ದಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೂಜಾ ಇವಳು 16 ವರ್ಷದವಳು ಇದ್ದರು ಎಂದರೆ ಸರಿಯಲ್ಲ. ನನ್ನ ಮಗಳು ಪೂಜಾ 18 ವರ್ಷದವಳು ಇದ್ದಳು ಹಾಗೂ ಅವಳು ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು, ಅದರಿಂದ ದಿನಕ್ಕೆ ರೂ.800/- ಪಡೆಯುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಪ್ರತಿ ದಿನ ರೂ.800/- ಕೂಲಿಯಿಂದ ಪಡೆಯುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮತ್ತು ಕೂಲಿ ಮಾಡುತ್ತೇನೆ. ನಾವು ಕೇಳಿದಂತೆ ಪರಿಹಾರ ಪಡೆಯಲು ಯಾವುದೇ ಆಧಾರವಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**